**AKSHARASURYA**
Peer-Reviewed, Multi Lingual E-Journal
Volume – 01, Issue – 03, December 2022.

# ಮಹಿಳಾ ಸಣ್ಣಕಥೆಗಳಲ್ಲಿ ಹೆಣ್ಣಿನ ಅನನ್ಯತೆಯ ಅಭಿವ್ಯಕ್ತಿ

**Dr. Savitha B.**
Assistant Professor
Department of P.G. Studies and Research in Kannada
Govt. College Kasaragod, Kerala.
savithabevinje@gmail.com

ಸ್ವಾಭಿಮಾನಿ ಮಹಿಳೆಯೊಬ್ಬಳು ತಾನು ತನ್ನನ್ನು ವ್ಯಾಖ್ಯಾನಿಸಿಕೊಳ್ಳಬೇಕಾದರೆ 'ನಾನು ಒಬ್ಬ ಹೆಂಗಸು' ಎಂದು ಮೊದಲು ಹೇಳಿಕೊಳ್ಳಬೇಕಾಗುತ್ತದೆ. ಮಲಯಾಳದ ಕಥೆಗಾರ್ತಿ ಚಂದ್ರಮತಿಯವರ ಒಂದು ಕಥೆ ಆರಂಭವಾಗುವ ರೀತಿಯೆಂದರೆ; 'ನಾನು ದೇವಿಗ್ರಾಮದ ಹೆಣ್ಣು, ಇದು ನನ್ನ ಗ್ರಾಮ' ಎಂದು. ಇಲ್ಲಿ 'ನಾನು' ಎನ್ನುವ ಆತ್ಮಾಭಿಮಾನ, ಆತ್ಮಗೌರವ ಇದುವೇ ಹೆಣ್ಣಿನ ಅನನ್ಯತೆಯನ್ನು ವ್ಯಕ್ತಪಡಿಸುತ್ತದೆ. ಆಧುನಿಕ ಜೀವನದ ಸಂದರ್ಭದಲ್ಲಿ ಶಿಕ್ಷಣ, ಉದ್ಯೋಗ ಮತ್ತು ಆರ್ಥಿಕ ಸ್ವಾವಲಂಬನೆ ಕುಟುಂಬದ, ಅದರಲ್ಲೂ ಹೆಣ್ಣಿನ ಜೀವನದ ಮೇಲೆ ಪ್ರತ್ಯಕ್ಷವಾಗಿಯೇ ಪ್ರಭಾವ ಬೀರುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕುಟುಂಬದಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತಿರುವ ಹೆಣ್ಣಿನ ಸಂದರ್ಭದಲ್ಲಿ 'ಸ್ವಾಭಿಮಾನ' ಪರಿಕಲ್ಪನೆಯನ್ನು ಅನ್ವಯಿಸಿಕೊಂಡು ಅಧ್ಯಯನ ಕೈಗೊಳ್ಳಬೇಕಾದ ಅಗತ್ಯ ಇಂದಿನ ಸಾಹಿತ್ಯಕ್ಕಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನಲ್ಲಿ 'ಸ್ವಾಭಿಮಾನ' ಪದಕ್ಕೆ ತನ್ನ ಬಗೆಗಿನ ಅಭಿಮಾನ, ಆತ್ಮಾಭಿಮಾನ ಎನ್ನುವ ಅರ್ಥ ವಿವರಣೆಯಿದ್ದರೆ, 'ಸ್ವಾಭಿಮಾನಿ' ಪದಕ್ಕೆ ಸ್ವಾಭಿಮಾನವುಳ್ಳವನು, ತನ್ನ ಗೌರವವನ್ನು ಕಾಪಾಡಿಕೊಳ್ಳುವವನು ಎನ್ನುವ ಅರ್ಥವಿದೆ.ಸಾಂಪ್ರದಾಯಿಕ ಸಮಾಜದಲ್ಲಿ ಮಹಿಳೆಯರು ಕುಟುಂಬದಲ್ಲಿ ಪುರುಷಾಧೀನರಾಗಿ, ಸ್ವಾಭಿಮಾನವೇ ಇಲ್ಲದವರಾಗಿ, ಅನ್ಯರಾಗಿ, ತಮ್ಮನ್ನು ತಾವು ಕಳೆದುಕೊಂಡವರಾಗಿ ಜೀವಿಸಿರುವುದೇ ಹೆಚ್ಚು. ಆದರೆ ಬದಲಾದ ಕಾಲದಲ್ಲಿ ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾವಲಂಬನೆ ಪಡೆದವರಾದ ಸ್ತ್ರೀಯರು ತಮ್ಮ ಅಧೀನ ಸ್ಥಿತಿಯ ಕಾರಣಗಳನ್ನು ಅರಿತುಕೊಂಡು ಶೋಷಣೆಗೆ ತಲೆಬಾಗದ ಪ್ರಜ್ಞೆಯಿಂದಲೇ ಜೀವನವನ್ನು ಎದುರಿಸುತ್ತಿರುವುದು ಲೇಖಕಿಯರ ಕಥೆಗಳಲ್ಲಿ ವ್ಯಕ್ತವಾಗಿವೆ. ಸ್ತ್ರೀಯರಿಗೆ ದೊರಕಿದ ಶಿಕ್ಷಣದ ಅವಕಾಶ, ಅದರಿಂದ ಉಂಟಾದ ತನ್ನತನದ ಅರಿವು, ಅದರ ಫಲವಾಗಿ ಹೆಚ್ಚಾದ ಕೌಟುಂಬಿಕ, ಬೌದ್ಧಿಕ ತರ್ಕಗಳಲ್ಲಿ ತನ್ನತನವನ್ನು ಬಿಟ್ಟುಕೊಡಲು ತಯಾರಿಲ್ಲದ ಮಹಿಳೆಯರು ಪ್ರಸ್ತುತ ಕುಟುಂಬದಿಂದ ಹೊರಬಂದು ಸಮಾಜವನ್ನು ಮೀರಿನಿಂತು ಒಂಟಿ ಬದುಕನ್ನು ಕಟ್ಟಿಕೊಳ್ಳುವ ಅಥವಾ ದೃಢನಿರ್ಧಾರ ತೆಗೆದುಕೊಂಡು ತನ್ನ ಬದುಕನ್ನು ಹಸನುಗೊಳಿಸುವ ಮಟ್ಟಿಗೆ ಮುಂದುವರಿದಿರುವುದು ವಾಸ್ತವಿಕ ಸತ್ಯವೇ ಆಗಿದೆ. ಇನ್ನೊಂದು ಕಡೆ, ಸ್ತ್ರೀಯರು ಸಾಂಗತ್ಯವಿಲ್ಲದ ಕುಟುಂಬದಿಂದ ದೂರ ಸರಿದು ಸಂಬಂಧಗಳ ಶಿಥಿಲತೆಗೆ ಕಾರಣರಾಗುತ್ತಿದ್ದಾರೆ ಎನ್ನುವ ಅಪವಾದವನ್ನು ಎದುರಿಸುವ ಪರಿಸ್ಥಿತಿಯು ಅವರಿಗೆ ಎದುರಾಗಿದೆ. ಆದ್ದರಿಂದಲೇ ಲೇಖಕಿಯರು ತಮ್ಮ ಕಥೆಗಳ ಮೂಲಕ ಹೆಣ್ಣಿನಲ್ಲಿ ಉಂಟಾದ ಸ್ವಾಭಿಮಾನದ ಸ್ಥಿತಿಯು ಸಂಬಂಧಗಳ ಶಿಥಿಲತೆಗೆ ಕಾರಣಗಳಾಗದೆ, ಹೇಗೆ ಬದುಕಿನಲ್ಲಿ ಸುಧಾರಣೆ, ಸಂಬಂಧಗಳ ನವೀಕರಣದ ಶೋಧನೆ ನಡೆಸಬಹುದೆಂಬುದಾಗಿ ಕಥೆಗಳ ಮೂಲಕ ಅನ್ವೇಷಣೆ ನಡೆಸಿದ್ದಾರೆ.

ಸ್ತ್ರೀಯಾಗಲಿ, ಪುರುಷನಾಗಲಿ ತನ್ನ ಕೇಂದ್ರದಲ್ಲಿ ತಾನು ಒಳಗೊಳ್ಳದಿರುವಂತದ್ದು, ಅವರನ್ನು 'ಬೇರೆ'ಯಾಗಿ ನೋಡುವುದು 'ಅನ್ಯ' ಸ್ಥಿತಿಯನ್ನು ವ್ಯಕ್ತಪಡಿಸಿದರೆ, ತನ್ನ ಕೇಂದ್ರದಲ್ಲಿ ತಾನು ಕಾಣಿಸಿಕೊಳ್ಳುವ, 'ಬೇರೆಯಲ್ಲದ' ಸ್ಥಿತಿಯೇ 'ಅನನ್ಯತೆ' ಎನಿಸುತ್ತದೆ. ಸಿಮೊನ್ ದ ಬೊವಾ ಹೇಳುವಂತೆ "ಗಂಡಸೊಬ್ಬ ತನ್ನನ್ನು ನಿರ್ದಿಷ್ಟ ಲಿಂಗಕ್ಕೆ ಸೇರಿದ ವ್ಯಕ್ತಿಯೆಂದು ಗುರುತಿಸಿಕೊಳ್ಳುವ ಮೂಲಕ ತನ್ನ ವಾದವನ್ನು ಮೊದಲು ಮಾಡುವುದಿಲ್ಲ; ಆತ ಹೇಳಿಕೊಳ್ಳದಿದ್ದರೂ ಆತನೊಬ್ಬ

ಗಂಡಸೆಂಬುದು ಅಂತಸ್ಥವಾಗಿ ಇರುತ್ತದೆ"–(ಸೆಕೆಂಡ್ ಸೆಕ್ಸ್, ಪೀಠಿಕೆಯಲ್ಲಿ, ಪು.26). ಆದರೆ ಹೆಣ್ಣಿನ ಸ್ಥಿತಿ ಹೀಗಿಲ್ಲ. ಮಹಿಳಾ ಬರಹಗಳಲ್ಲಿ 'ನಾನು ಒಬ್ಬ ಹೆಂಗಸು' ಎಂಬ ಸತ್ಯವನ್ನು ಆಧರಿಸಿಯೇ ಮುಂದಿನ ಚರ್ಚೆ ಬೆಳೆಯಬೇಕಾಗುತ್ತದೆ. ಇಲ್ಲಿ ಪಕ್ಷಪಾತ ದೃಷ್ಟಿಕೋನವಿದೆ. ಗಂಡಸು ಮತ್ತು ಸ್ತ್ರೀ ಎನ್ನುವಾಗ ಕೆಲವು ಮೌಲ್ಯಗಳು ಅವರ ಮೇಲೆ ಆರೋಪಿಸಲ್ಪಟ್ಟಿದೆ. 'ಗಂಡಸು' ಪದಕ್ಕೆ ಆರೋಪಿಸಲಾಗಿರುವ ಮೌಲ್ಯ ದೃಷ್ಟಿಕೋನವು ಸಕಾರಾತ್ಮಕ ಮತ್ತು ನಕಾರಾತ್ಮಕ ಧ್ರುವಗಳನ್ನು ಪ್ರತಿನಿಧಿಸಿದರೆ, ಸ್ತ್ರೀ ಮೌಲ್ಯವು ಯಾವತ್ತೂ ನಕಾರಾತ್ಮಕ ಮೌಲ್ಯ ದೃಷ್ಟಿಕೋನವನ್ನು ಮಾತ್ರ ಪ್ರತಿನಿಧಿಕರಿಸುತ್ತದೆ. ಸ್ತ್ರೀ ಪುರುಷರಿಬ್ಬರೂ ಮನುಷ್ಯ ಜಾತಿಯವರಾಗಿರುವಾಗ ಯಾಕಾಗಿ ಇಂತಹ ಅಸಮಾನತೆ ಸಮಾಜದಲ್ಲಿ ನಡೆಯುತ್ತದೆ? ಇದರ ಹಿಂದಿನ ಕಾರಣಗಳೇನು? ಎನ್ನುವುದು ಲೇಖಕಿಯರಲ್ಲಿ ಮೂಡಿದ ಪ್ರಶ್ನೆ ಹಾಗೂ ಬಹು ಗಂಭೀರ ಚರ್ಚೆಗೊಳಗಾದ ವಿಷಯ.

ಸಂದರ್ಶನವೊಂದರಲ್ಲಿ ವೈದೇಹಿಯವರು ಹೇಳುವ ಮಾತು "ನಮ್ಮ ಅನನ್ಯತೆ ನಮಗಿದೆ. ನಾವು ಅದನ್ನು ಉಳಿಸಿಕೊಳ್ಳಬೇಕು. ನಮ್ಮ ಪ್ರಪಂಚದ ಬಗ್ಗೆ ಕೀಳರಿಮೆ ಅಗತ್ಯವಿಲ್ಲ. ಅವರು ನಮ್ಮಂತಾಗಲಿ, ನಾವು ಅವರಂತಾಗುವ ಅಗತ್ಯವಿಲ್ಲ ಎನ್ನುವವರೆಗೂ ಸ್ತ್ರೀಲೋಕ ಸತ್ವಶಾಲಿ. ನಾವು ನಮ್ಮಂತೆ, ನಮ್ಮ ಉದ್ದಗಲದ ಮಿತಿಯಂತೆ ಬದುಕಲು ಸಾಧ್ಯವಾದರೆ ಸಾಕು"–(ವಿಜಯಕರ್ನಾಟಕ, 10.03.2003). ಆಧುನಿಕ ಕಾಲದಲ್ಲಿ ಹೆಣ್ಣಿನ ಬೆಳವಣಿಗೆಗೆ ಸಹಾಯಕವಾಗುವ ಪೋಷಕ ವ್ಯಕ್ತಿಗಳು, ಪಾತ್ರಗಳು ಇದ್ದರೂ ಅವರು ಬೆಳೆಯಬೇಕಾದುದು ತಮ್ಮದೇ ಸತ್ವಬಲದಿಂದ ಎಂದು ಸೂಚಿಸುತ್ತಾರೆ.ಕೆ. ಶಾರದ ಭಟ್ ಅಭಿಪ್ರಾಯ ಪಡುವಂತೆ "ಸಂಪ್ರದಾಯ ಒಂದೋ ಸೀತೆಯಾಗುವ ಇಲ್ಲವೇ ದ್ರೌಪದಿಯಾಗುವ ಆಯ್ಕೆಯನ್ನು ಮಾತ್ರ ಹೆಣ್ಣಿಗೆ ಕೊಟ್ಟಿದೆ. ಈ ಆಯ್ಕೆಗಳನ್ನು ಬದಿಗಿರಿಸಿ ನಾವು ನಾವೇ ಆಗುವ, ನಮಗೆ ನಾವೇ ಆಯ್ಕೆಗಳಾಗುವ, ಮಾದರಿಯಾಗುವ ವ್ಯಕ್ತಿತ್ವವನ್ನು ಕಟ್ಟಿಕೊಳ್ಳುವ ಎದೆಗಾರಿಕೆ ಬೆಳೆಸಿಕೊಳ್ಳಬೇಕಾಗಿದೆ. ಅದಕ್ಕೆ ಅಡ್ಡಿಯಾಗಬಹುದಾದ ಎಲ್ಲ ಆತಂಕಗಳನ್ನೂ ನಿವಾರಿಸಿಕೊಳ್ಳುವ ಅನನ್ಯತೆ ಹೆಣ್ಣಿನಲ್ಲಿರುವಾಗ ಅದನ್ನು ಬಳಸಿಕೊಳ್ಳಲು ಇರುವ ಹಿಂಜರಿಕೆಗಳನ್ನು ಆಕೆ ಮೀರಬೇಕಾಗಿದೆ. ಸಂಗಾತಿ, ಉಡುಪು, ತಾಯ್ತನ ಇತ್ಯಾದಿ ಸಂಪೂರ್ಣ ಖಾಸಗಿಯಾದ ವಿಷಯಗಳ ಆಯ್ಕೆಯ ಸ್ವಾತಂತ್ರ್ಯ, ಅವಳನ್ನು ಆತ್ಮಗೌರವವುಳ್ಳ ವ್ಯಕ್ತಿಯಾಗಿ ನೋಡುವುದು, ವ್ಯಕ್ತಿ ಘನತೆಯನ್ನು ಬೆಂಬಲಿಸುವುದರಿಂದ ಆರೋಗ್ಯಕರ ಸಮಾಜ ನಿರ್ಮಾಣಗೊಳ್ಳಬಲ್ಲುದು"–(ಕೈಗನ್ನಡಿ, ಪು.82). ಎಂದರೆ ಮೇಲಿನ ಮಾತುಗಳ ಪ್ರಕಾರ 'ನಾವು ನಾವೇ ಆಗುವ ಅನನ್ಯತೆ' ಹೆಣ್ಣಿನಲ್ಲಿ ಸುಪ್ತವಾಗಿಯೇ ಇದೆ. ಆದರೆ ಆ ಅನನ್ಯತೆ ಪ್ರಕಟಗೊಳ್ಳಲು ಸೂಕ್ತವಾದ ವಾತಾವರಣ ಮಾತ್ರ ಸೃಷ್ಟಿಯಾಗಬೇಕಿದೆ.

ಪುರುಷಪ್ರಧಾನ ಸಮಾಜದಲ್ಲಿ 'ನೀನೊಬ್ಬಳು ಹೆಂಗಸು' ಎನ್ನುವ ಜೈವಿಕ ಭಿನ್ನತೆಗನುಸಾರವಾಗಿ ನಡೆಸಿರುವ ಪ್ರತ್ಯೇಕತಾವಾದಿ ಮೌಲ್ಯ ದೃಷ್ಟಿಕೋನವೇ ಹೆಣ್ಣಿನ ಅಡೆತಡೆಗಳಿಗೆ ಕಾರಣವಾಗಿದೆ. ಸ್ತ್ರೀಯರ ವಿಷಯವಾಗಿ ಮಾತನಾಡುವಾಗ "ಕೆಲವು ಗುಣಗಳನ್ನು ಹೊಂದಿಲ್ಲದೇ ಇರುವುದರಿಂದ ಸ್ತ್ರೀಯಾಗಿದ್ದಾಳೆ. ಸ್ತ್ರೀ ಸ್ವಭಾವವು ಕೆಲವು ಪ್ರಾಕೃತಿಕ ಕೊರತೆಗಳಿಂದ ಪೀಡಿತವಾಗಿದೆ" ಎಂದು ಅರಿಸ್ಟಾಟಲ್ ಹೇಳಿದರೆ, ಸಂತ ಥಾಮಸ್ ಹೆಂಗಸನ್ನು 'ಅಪರಿಪೂರ್ಣ ಗಂಡಸು', ಒಂದು 'ಆಕಸ್ಮಿಕ ಜೀವಿ' ಎಂದು ವಿವರಿಸುತ್ತಾನೆ. ಬೆಂಡ ತನ್ನ 'ರ್‍ಯಾಪೋರ್ಟ್ ಡಿ ಯುರೀಲ್' ಕೃತಿಯಲ್ಲಿ "ಗಂಡಸಿನ ದೇಹ ತನ್ನಷ್ಟಕ್ಕೆ ತಾನು ಅರ್ಥಪೂರ್ಣವಾದುದು. ಅದಕ್ಕೆ ಹೆಂಗಸಿನ ಜೊತೆ ಯಾವ ಸಂಬಂಧವೂ ಇಲ್ಲ. ಆದರೆ, ಹೆಂಗಸಿನ ದೇಹಕ್ಕೆ ಈ ಗುಣಗಳಿಲ್ಲದ ಕೊರತೆಯಿದೆ. ಗಂಡಸು ಹೆಂಗಸಿಲ್ಲದೆಯೂ ತಾನೇ ತನ್ನ ಬಗ್ಗೆ ಯೋಚಿಸಬಲ್ಲ. ಹೆಂಗಸು ಮಾತ್ರ ಗಂಡಸನ್ನು ಹೊರತುಪಡಿಸಿ ತನ್ನ ಬಗ್ಗೆ ಯೋಚಿಸಲಾರಳು" ಎನ್ನುತ್ತಾರೆ. ಇಲ್ಲಿ ಗಂಡಸಿಗೆ ಪ್ರತ್ಯೇಕವಾದ ಅಸ್ತಿತ್ವವಿದೆ. ಸ್ತ್ರೀಯು ಲಿಂಗ ಸಂಬಂಧಿಯಾಗಿಯೇ ಗುರುತಿಸಲ್ಪಟ್ಟಿದ್ದಾಳೆ. ಆದ್ದರಿಂದಲೇ ಬೊವಾ ಹೇಳುವಂತೆ "ಆಕೆಯೊಂದು ಆಕಸ್ಮಿಕ. ಸಾರರೂಪಿಯಾದ ಗಂಡಸಿಗೆ ಹೋಲಿಸಿದಾಗ ನಗಣ್ಯಳು. ಆತ ಕರ್ತೃ. ಆತ ಪರಿಪೂರ್ಣ. ಆಕೆ ಅನ್ಯ"–(ಸೆಕೆಂಡ್ ಸೆಕ್ಸ್, ಪೀಠಿಕೆಯಲ್ಲಿ). ಜಾಗತಿಕವಾಗಿಯೇ ಹೆಣ್ಣು ಈ 'ಅನ್ಯ' ಸ್ಥಿತಿಗೆ ಒಳಗಾಗಿದ್ದಾಳೆ. 'ಅನ್ಯತೆ'ಯ ಸ್ಥಿತಿಯನ್ನು ಬೇರೆ ಬೇರೆ ನೆಲೆಗಳಲ್ಲಿ ವಿವರಿಸಿಕೊಳ್ಳಬಹುದಾದರೂ ಇಲ್ಲಿ,

ಚರಿತ್ರೆಯಿಂದಲೇ 'ಅನ್ಯ' ಸ್ಥಿತಿಗೆ ಒಳಗಾಗುತ್ತಾ ಬಂದಿರುವ ಮಹಿಳೆಯರ ಸ್ಥಿತಿಗತಿಗಳು ಪ್ರಸ್ತುತ ಯಾವ ಬದಲಾವಣೆಗಳನ್ನು ಪಡೆದಿವೆ? ಈ ಬದಲಾವಣೆಯ ಹಿಂದಿನ ಕಾರಣಗಳೇನು? ಅದರ ಸ್ವರೂಪವೇನು? ಹೆಣ್ಣಿನಲ್ಲಿ ಮೂಡಿಬರುತ್ತಿರುವ ಅನನ್ಯತೆಯು ಸ್ವಾಭಿಮಾನದ ಬದುಕಿಗೆ ಕಾರಣವಾಗಿದೆಯೇ? ಸ್ವಾಭಿಮಾನಿ ಮಹಿಳೆ ಎದುರಿಸುವ ಸವಾಲುಗಳೇನು? ತನ್ನ ಆತ್ಮಗೌರವಕ್ಕೆ ಪೆಟ್ಟಾದಾಗ ಆಕೆ ತೋರಿಸುವ ಪ್ರತಿರೋಧದ ಸ್ವರೂಪವೇನು? ಶಿಕ್ಷಣ ಮತ್ತು ಆರ್ಥಿಕತೆ ಹೆಣ್ಣಿಗೆ ನೀಡಿದ ಸ್ವಾಭಿಮಾನದ ಬದುಕು ಕುಟುಂಬ ಸಂಬಂಧಗಳ ಶಿಥಿಲತೆಗೆ ಕಾರಣವಾಗಿದೆಯೇ? ಎನ್ನುವುದು ಲೇಖಕಿಯರ ಕಥೆಗಳ ಹಿನ್ನೆಲೆಯಲ್ಲಿ ಮುಖ್ಯ ಚರ್ಚಾ ವಿಷಯವೆನಿಸುತ್ತವೆ.

ಸಾಮಾಜಿಕ ವ್ಯವಸ್ಥೆಯು ಹೆಣ್ಣಿನ ಆರ್ಥಿಕತೆಯನ್ನಷ್ಟೇ ಅಲ್ಲದೆ, ಅವಳ ವ್ಯಕ್ತಿತ್ವದ ಆಂತರಂಗಿಕ ಸಂಗತಿಗಳಾದ ಬೌದ್ಧಿಕ ಮತ್ತು ಭಾವನಾ ವಲಯಗಳ ಕ್ರಿಯಾಶೀಲತೆಯನ್ನು ಕೂಡ ದಮನ ಮಾಡುತ್ತಾ ಬಂದಿದೆ. ಪ್ರತಿಯೊಬ್ಬ ಮನುಷ್ಯನ ಬದುಕು ಸುಸಂಗತವಾಗಲು ದೇಹದ ಜೊತೆಯಲ್ಲಿ ಬುದ್ಧಿ ಮತ್ತು ಮನಸ್ಸುಗಳು ಕ್ರಿಯಾಶೀಲವಾಗಿರಬೇಕಾಗುತ್ತದೆ. ಆದರೆ ಮಹಿಳೆಯರ ವಿಷಯವಾಗಿ ಹೇಳುವಾಗ ಪ್ರಧಾನ ಸಂಸ್ಕೃತಿಯು ಆಕೆಯ ಬುದ್ಧಿ ಮತ್ತು ಮನಸ್ಸುಗಳ ಪ್ರಜ್ಞೆಯನ್ನು ವಸಾಹತೀಕರಣಗೊಳಿಸಿದೆ. ಪ್ರಜ್ಞೆಯನ್ನು ಕಳಕೊಂಡ ಸ್ಥಿತಿಯಲ್ಲಿ ಆಕೆ ಸ್ವತಂತ್ರವಾಗಿ ಯೋಚಿಸಲಾರಳು, ತೀರ್ಮಾನ ಕೈಗೊಳ್ಳಲಾರಳು, ಅವಕಾಶಗಳನ್ನು ಆಯ್ಕೆ ಮಾಡಿಕೊಳ್ಳಲಾರಳು. ಪುರುಷಸ್ಥಿರೀಕರಣದ ರಚನೆಗಳೆಂದು ಕರೆಸಿಕೊಂಡಿರುವ,ಇಂತಹ ಯಾವುದೇ ಬದಲಾವಣೆಗಳಿಲ್ಲದ ನಿಯಂತ್ರಿತ ಸ್ತ್ರೀ ಮಾದರಿಗಳಲ್ಲಿ ಮೀರುವಿಕೆಯ ಅಪೇಕ್ಷೆಗಳು ಇದ್ದರೂ ಅವಕಾಶಗಳು ತೆರೆದುಕೊಂಡಿರಲಿಲ್ಲ. ಮೀರುವಿಕೆಗೆ ಅಗತ್ಯವಾದಂತಹ ಸಂಪನ್ಮೂಲಗಳು ಅವರ ಬಳಿಯಲ್ಲಿ ಇದ್ದಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಗೆ ಆತ್ಮವಿಶ್ವಾಸ, ಸ್ವಾಭಿಮಾನ, ದಿಟ್ಟತನ ಮೂಡುವುದೂ ಕನಸಿನ ಮಾತಾಗಿತ್ತು. ಈ ಸಂದರ್ಭಗಳಲ್ಲಿ ವ್ಯಕ್ತಿತ್ವಕ್ಕೆ ಧಕ್ಕೆ ಬಂದರೂ ಅನ್ಯ ದಾರಿಗಳಿಲ್ಲದೆ, ಚೌಕಟ್ಟನ್ನು ಮೀರಿ ಬದುಕಲು ಸಾಧ್ಯವಾಗದೆ, ಪುರುಷಾಧೀನರಾಗಿಯೇ, ಅವರು ನೀಡುತ್ತಿದ್ದ ಶೋಷಣೆಗಳನ್ನು ಸಹಿಸುತ್ತಾ ಮೌನಿಯಾಗಿ, ಮಾತನಾಡಲಾರದೇ ಕಳೆದುಹೋಗಿದ್ದರು.ಇದರ ಹಿನ್ನೆಲೆಯಲ್ಲಿ ಆ ಕಾಲದ ಸಾಮಾಜಿಕ ಪರಿಸರವು ಕೆಲಸ ಮಾಡಿದೆ. ವ್ಯವಸ್ಥೆಯ ಭಾಗವಾಗಿ ಹೋದ ಸ್ತ್ರೀ ಪಾತ್ರಗಳಲ್ಲಿ ಸಿಟ್ಟು, ರೋಷಗಳಿದ್ದರೂ ಏನೂ ಮಾಡಲಾಗದ ಅಸಹಾಯಕತೆ ಕಾಣಿಸಿಕೊಳ್ಳುತ್ತದೆ. ಕೆಲವೊಮ್ಮೆ ತಮ್ಮ ದೀನ ಸ್ಥಿತಿಯ ಅರಿವು ಮೂಡಿದ ಪಾತ್ರಗಳು ಸ್ವಗತದಲ್ಲಿ ಮೌನವಾಗಿ ಅಂತರಂಗದೊಳಗೇ ಪ್ರತಿಭಟಿಸಿದ್ದಿದೆ. ಉದಾಹರಣೆಗೆ ವೈದೇಹಿಯವರ ಚಿಪ್ಪು, ಬೀಳು–ಬೇರು ಕಥೆಗಳ ಇಂದಿ, ಯಶೋಧ ಇವರಲ್ಲಿ ಅರಿವು ನೀಡಿದ ಸ್ವಾಭಿಮಾನ ಎಚ್ಚೆತ್ತಿದ್ದರೂ ಅವರನ್ನು ಆವರಿಸಿದ್ದ ಸಾಮಾಜಿಕ ಪರಿಸರ ಸಾಂಪ್ರದಾಯಿಕವಾಗಿಯೇ ಇದ್ದುದರಿಂದ ಸ್ವಗತದ ಪ್ರತಿಭಟನೆ ಕಾಣಿಸಿಕೊಳ್ಳುತ್ತದೆ.

ವಸುಮತಿ ಉಡುಪರವರು ಸಂದರ್ಶನವೊಂದರಲ್ಲಿ ಹೇಳುವಂತೆ "ವಿದ್ಯೆ ಇಲ್ಲದೆ ಬದುಕಲು ಬಹುಮುಖ್ಯವಾಗಿ ಬೇಕಾದ ಆರ್ಥಿಕ ಸ್ವಾತಂತ್ರ್ಯವಿಲ್ಲದ ಹೆಣ್ಣುಗಳು, ಹೊಸಲಿನಾಚೆಯ ಪ್ರಪಂಚವನ್ನು ಕಂಡಿಲ್ಲದ ಸ್ತ್ರೀಯರು ವ್ಯವಸ್ಥೆಗೆ ತಲೆಬಾಗಿ, ವಿಧಿಯಿಲ್ಲದೆ ಪುರುಷನ ಯಜಮಾನಿಕೆಯನ್ನು ಒಪ್ಪಿಕೊಳ್ಳಬೇಕಾದಂತಹ ಕಾಲ ಒಂದು ಇತ್ತು. ಬದಲಾದ ಕಾಲದಲ್ಲಿ ಸಶಕ್ತರಾಗಿ ತಮ್ಮ ಬದುಕನ್ನು ಸ್ವತಂತ್ರವಾಗಿ ಕಲ್ಪಿಸಿಕೊಂಡು ಬದುಕುವ ಎಷ್ಟೋ ಮಹಿಳೆಯರು ಇಂದಿನ ಕಾಲದಲ್ಲಿದ್ದಾರೆ. ಅಂತಹ ಕಥಾಪಾತ್ರಗಳನ್ನು ಲೇಖಕಿಯರು ತಮ್ಮ ಕಥೆಗಳಲ್ಲಿ ಸೃಜಿಸಿದ್ದಾರೆ. ಕಾಲಬದಲಾದಂತೆ ಹೆಣ್ಣು ಸ್ವಾಭಿಮಾನದ ಬದುಕು ಕಲ್ಪಿಸಿಕೊಂಡು ತಲೆಯೆತ್ತಿ ನಿಂತಿದ್ದಾಳೆ. ಸಮಾಜದ ಪ್ರತಿಬಿಂಬವಾಗಿರುವ ಕಥಾಪಾತ್ರಗಳಲ್ಲಿ ಇವು ತನ್ನಷ್ಟಕ್ಕೆ ತಾನೇ ಬಂದಿವೆ"–(ಉಷಾ ನರಸಿಂಹನ್ ನಡೆಸಿರುವ ಸಂದರ್ಶನ, ಮಯೂರ–ಡಿಸೆಂಬರ್, 2006) ಎನ್ನುತ್ತಾರೆ. ವೈದೇಹಿ, ವೀಣಾ ಶಾಂತೇಶ್ವರ, ತುಳಸೀ ವೇಣುಗೋಪಾಲ್, ಬಾನು ಮುಸ್ತಾಕ್ ಮೊದಲಾದವರ ಕಥೆಗಳ ಸ್ತ್ರೀ ಪಾತ್ರಗಳು ಸ್ವಾವಲಂಬಿಗಳು, ತಮ್ಮ ವ್ಯಕ್ತಿತ್ವದ

ಬಗೆಗೆ ಘನತೆ, ಗೌರವವುಳ್ಳವರು, ತಮ್ಮ ಆತ್ಮಾಭಿಮಾನಕ್ಕೆ ಧಕ್ಕೆಯೊದಗುವ ಸಂದರ್ಭಗಳಲ್ಲಿ ಪ್ರತಿಕ್ರಿಯಿಸುವವರು. ಆದ್ದರಿಂದಲೇ ಇವರ ಕಥೆಗಳ ನಾಯಕಿಯರಲ್ಲಿ ಜೀವಂತಿಕೆ ಎದ್ದು ಕಾಣುವ ಲಕ್ಷಣವಾಗಿ ಗಮನ ಸೆಳೆಯುತ್ತದೆ.

ವೈದೇಹಿಯವರು ತಮ್ಮ ಕಥೆಗಳಲ್ಲಿ ವ್ಯಕ್ತಿತ್ವ, ಸಾಮರ್ಥ್ಯ, ಘನತೆ, ಗೌರವವಿರುವ ಸ್ತ್ರೀ ಪಾತ್ರಗಳನ್ನು ಚಿತ್ರಿಸಿದ್ದಾರೆ. ಪುರುಷಪ್ರಧಾನ ಜಗತ್ತಿನೊಳಗೆ ತಮ್ಮ ಸ್ವಾಭಿಮಾನವನ್ನು ಉಳಿಸಿಕೊಳ್ಳಲು ಹೆಣಗಾಡುವ ಅನೇಕ ಪಾತ್ರಗಳು ಇವರ ಕಥೆಗಳಲ್ಲಿವೆ. ಇವರ ಅಕ್ಕು, ಅಮ್ಮಚ್ಚಿಯೆಂಬ ನೆನಪು, ವಾಣಿಮಾಯಿ ಕಥೆಗಳ ಅಕ್ಕು, ಅಮ್ಮಚ್ಚಿ, ವಾಣಿಮಾಯಿಯರು ಲಿಂಗ ರಾಜಕಾರಣದ ಹುನ್ನಾರಗಳಿಗೆ ಪ್ರತಿ ರಾಜಕಾರಣಗಳನ್ನು ಹೂಡಿ ತಮ್ಮ ವ್ಯಕ್ತಿತ್ವದ ಘನತೆಯನ್ನು ಮೆರೆಯುತ್ತಾರೆ. ಅಕ್ಕು ತನ್ನ ಪಿರ್ಕಿತನದ ಭ್ರಮೆಯಲ್ಲಿ ಯಾವುದೇ ನಿರ್ಬಂಧವಿಲ್ಲದ ಮಾತುಗಳ ಮೂಲಕವೇ ಅವಿಭಕ್ತ ಕುಟುಂಬದ ಯಾಜಮಾನ್ಯವನ್ನು ಪ್ರತಿಭಟಿಸುತ್ತಾಳೆ. ಪುರುಷಪ್ರಧಾನ ವ್ಯವಸ್ಥೆಯನ್ನು ಪಾಲಿಸಿಕೊಂಡು ಬಂದಿರುವ ಅಜ್ಜಯ್ಯ ಮತ್ತು ವಾಸು ಚಿಕ್ಕಪ್ಪಯ್ಯನವರು ಭಯದ ಮೂಲಕವೇ ಸ್ತ್ರೀಯರನ್ನು ತಮ್ಮ ನಿಯಂತ್ರಣದಲ್ಲಿ ಇರಿಸಿಕೊಂಡಿರುತ್ತಾರೆ. ಅವರ ಭಯಕ್ಕೆ ಕುಟುಂಬದ ಇತರ ಸದಸ್ಯರು ಮೌನವಾಗುವ ಸಂದರ್ಭಗಳಲ್ಲಿ ಅಕ್ಕುವಿನ ಪ್ರಜ್ಞೆಯಲ್ಲಿ ಮಾತ್ರ ಪ್ರತಿಭಟನೆ ಕಾಣಿಸಿಕೊಳ್ಳುತ್ತದೆ. ಅಕ್ಕುವಿನ ಹುಚ್ಚು ಅವಳು ಸಮಾಜದಿಂದ ಪಡೆದುಕೊಂಡದ್ದು. ತನ್ನ ಈ ಸ್ಥಿತಿಯ ಮೂಲಕವೇ ಅವಳು ಸಮಾಜವನ್ನು ಎದುರಿಸುವಂತದ್ದು. ಅಕ್ಕುವಿನ ಯಾರಿಗೂ ಹೆದರದ ಮುಕ್ತ ಮಾತುಗಳು ಇಡೀ ವ್ಯವಸ್ಥೆಯ ಬಗೆಗಿನ ಟೀಕೆಗಳಾಗಿ ಮಹತ್ವ ಪಡೆದಿವೆ. ಪುರುಷರು ಮಾಡುವ ಅನೈತಿಕ ಚಟುವಟಿಕೆಯನ್ನು ಅಕ್ಕುವಿನ ಯಾವುದೇ ಮುಲಾಜಿಲ್ಲದ ಮಾತುಗಳು ಬಹಿರಂಗಪಡಿಸುತ್ತವೆ. ವ್ಯವಸ್ಥೆಯು ಅಕ್ಕುವನ್ನು ಧಮನ ಮಾಡಲು ಪ್ರಯತ್ನಿಸಿದಷ್ಟೂ ಅಕ್ಕುವಿನ ಪ್ರತಿಭಟನೆ ತೀವ್ರತೆಯನ್ನು ಪಡೆಯುತ್ತಾ ಹೋಗುತ್ತದೆ. ಅಮ್ಮಚ್ಚಿಯ ಪಾತ್ರ ಕೂಡ ಅಕ್ಕುವಿನ ಅದೇ ಮಾದರಿಯಲ್ಲಿ ಪುರುಷ ಹುನ್ನಾರಗಳನ್ನು ಎದುರಿಸಿ ಸ್ವಾಭಿಮಾನ ಮೆರೆಯುವ ಪಾತ್ರ. ಎಂತಹ ಪರಿಸ್ಥಿತಿಯಲ್ಲೂ ಸ್ವಾಭಿಮಾನ, ಸ್ವಂತಿಕೆಗಳನ್ನು ಬಿಟ್ಟುಕೊಡದ ಅಮ್ಮಚ್ಚಿಯ ಪಾತ್ರ ಸ್ವತಂತ್ರ ವ್ಯಕ್ತಿತ್ವವುಳ್ಳದ್ದು. ಆಶ್ರಯದಾತನಂತೆ ಕಾಣಿಸಿಕೊಳ್ಳುವ ವೆಂಕಪ್ಪಯ್ಯನನ್ನು ಪ್ರತಿಯೊಂದು ಹಂತದಲ್ಲೂ ಎದುರಿಸುವ ಅಮ್ಮಚ್ಚಿ ಸ್ವಾಭಿಮಾನದ ಛಲವುಳ್ಳ ಹೆಣ್ಣು.

ವೈದೇಹಿಯವರು ಹೆಣ್ಣನ್ನು ಅನೇಕ ಪರಿಪ್ರೇಕ್ಷದಲ್ಲಿ ಇಟ್ಟು ನೋಡುವಾಗಲೂ ಒಂದು ಜೈವಿಕ ಲಿಂಗವಾಗಿ ಹೆಣ್ಣಿನ ಅನನ್ಯ, ವಿಶಿಷ್ಟ ಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಮಾತನಾಡುತ್ತಾರೆ. ಇವರು 'ನಮ್ಮ ಲೋಕದ ಗೀತೆ' ಪ್ರಬಂಧದಲ್ಲಿ ಹೇಳುವಂತೆ "ಪುರುಷರಿಗೆ ನಾವು ಎಂದಿಗೂ ಸಮರಲ್ಲ. ಅದಕ್ಕಿಂತ ಮುಖ್ಯವಾಗಿ ನಮ್ಮ ಸಮಕ್ಕೆ ಪುರುಷರು ಎಂದೂ ಬಂದು ನಿಲ್ಲಲಾರರು. ಎಲ್ಲಿ ಸಮಾನ ಅವಕಾಶಗಳನ್ನು ಪಡೆಯಲಾರೆವೋ ಅಲ್ಲಿ ಹೋರಾಡಿಯಾದರೂ ಒಂದಲ್ಲ ಒಂದು ದಿನ ಸಮಾನ ಅವಕಾಶ ಗಳಿಸಿಕೊಂಡೇವು. ಆದರೆ ತಂತಾನೇ ಲಭ್ಯವಾಗುವ ನಮ್ಮದೇ ಆದ ಅನುಭವಗಳನ್ನು ಗುರುತಿಸುತ್ತ ಗೌರವಿಸುವುದನ್ನು ಬಿಟ್ಟು ಧಿಕ್ಕರಿಸುವುದರಲ್ಲಿ ಹೀಯಾಳಿಸುವುದರಲ್ಲಿ ಏನು ಬಂತು? ನಾವೇಕೆ ಪುರುಷ ದನಿಯಲ್ಲಿ ಮಾತಾಡಬೇಕು? ನಾವು ನಮ್ಮ ಕಂಠದಲ್ಲಿ ಹಾಡೋಣ. ಅದು ಜೋ ರಾಗವಿರಲಿ, ಪ್ರೇಮರಾಗವಿರಲಿ, ಇನ್ನಾವ ಬಗೆಯ ರಾಗ–ವಿರಾಗಗಳೇ ಇರಲಿ. ನಮ್ಮದೇ ದನಿ ಅಲ್ಲಿರಲಿ"–(ವೈದೇಹಿ ಕಥನ, ಪು.13). ವೈದೇಹಿಯವರ ಮೇಲಿನ ಮಾತುಗಳು ಸ್ತ್ರೀಯರು ತಮ್ಮಲ್ಲಿ ಅಂತರ್ಗತವಾಗಿರುವ ಸ್ತ್ರೀ ವಿಶಿಷ್ಟ ಅನನ್ಯತೆಯನ್ನು ಗುರುತಿಸಿಕೊಳ್ಳುತ್ತಾ ಸ್ವಾಭಿಮಾನದಿಂದ ಬದುಕನ್ನು ಕಟ್ಟಿಕೊಳ್ಳಬೇಕಾದ ಅಗತ್ಯವನ್ನು ಸಾರುತ್ತದೆ. ಇವರ 'ಚಿಪ್ಪು' ಕಥೆಯಲ್ಲಿ ಹೆಣ್ಣು ತನ್ನ ಕಥೆಯನ್ನು ಹೇಳತೊಡಗಿದ್ದಾಳೆ. ಕಥಾನಾಯಕಿಯ ಉತ್ತಮಪುರುಷ ನಿರೂಪಣೆಯಲ್ಲಿ ಕಥೆಯಿದೆ. ಕಥೆಯ ಸಾಲುಗಳು 'ಅಪ್ಪ ತನಗಾಗಿ ವರ ಹುಡುಕುತ್ತಿದ್ದಾರೆ. ತುಂಬ ಇದ್ದವನನ್ನು ಹಿಡಿದು ಅವನಿಗೆ ತನ್ನನ್ನು ಕೊಡಬೇಕೆಂಬ ಆಸೆ ಅಪ್ಪನಿಗೆ. ಅವನು ನೋಡಲೂ ಚೆಂದವಿರಬೇಕು. ಏಕೆಂದರೆ ಅವರ ಮಗಳ ಗಂಡನಾಗುವವ ಚೆಂದವಿರಲೇಬೇಕಂತೆ' ಕಥೆ ಹೀಗೆ ಆರಂಭವಾಗಿ ಮುಂದುವರಿಯುತ್ತದೆ. ಎಂದರೆ ಇಲ್ಲಿ ಕಥೆ ಯಾರ ದೃಷ್ಟಿಕೋನದಲ್ಲಿ

ಬೆಳೆಯಬೇಕು(ಕಠುಟಿಣ ಠಜಿ ತುಜತಿ) ಎನ್ನುವಲ್ಲಿ ಹೆಣ್ಣೇ ಕಾಣಿಸಿಕೊಂಡಿದ್ದಾಳೆ. ಆಧುನಿಕ ಕಥೆಗಳಲ್ಲಿ ಕೇಂದ್ರ ಸ್ಥಾನ ಹೆಣ್ಣಿನದ್ದು. ತನ್ನ ಬದುಕಿನ ಸಂದಿಗ್ಧ ಪರಿಸ್ಥಿತಿಗಳಲ್ಲಿ ತೀರ್ಮಾನ ಕೈಗೊಳ್ಳುವ ಅಧಿಕಾರವೂ ಅವಳದ್ದೇ.

ನೇಮಿಚಂದ್ರರ 'ನಮ್ಮ ಕನಸುಗಳಲ್ಲಿ ನೀವಿದ್ದಿರಿ' ಕಥೆಯಲ್ಲಿ ಸಾಂಗತ್ಯವಿಲ್ಲದ ದಾಂಪತ್ಯದಿಂದ ಹೊರಬಂದು ಪರ್ಯಾಯವಾಗಿ ಇನ್ನೋರ್ವನನ್ನು ಆಯ್ಕೆ ಮಾಡಿಕೊಳ್ಳುವ ಸ್ವಾಭಿಮಾನಿಯಾದ ಹೆಣ್ಣಿನ ಚಿತ್ರಣವಿದೆ. ಕಥಾನಾಯಕಿ ಪುರುಷಾಧಿಪತ್ಯದ ನಿಯಂತ್ರಣದ ಬಾಳಿನಲ್ಲಿ ಅಸ್ವಸ್ಥತೆ, ಕೊರತೆಯನ್ನು ಅನುಭವಿಸುತ್ತಾಳೆ. ಯಾಂತ್ರಿಕ ಬದುಕಿನ ನೀರಸತೆ, ಪುರುಷಾಧಿಪತ್ಯ, ಅಧೀನ ಸ್ಥಿತಿ ತಂದೊಡ್ಡುವ ಅಸಹಾಯಕತೆ ಇವೆಲ್ಲವನ್ನು ಮೌನವಾಗಿ ಮನದಾಳದಲ್ಲಿ ಎದುರಿಸುವ ಇಲ್ಲಿನ ನಾಯಕಿ ತನಗೆ ದಾಂಪತ್ಯ ಜೀವನದಲ್ಲಿ ಬಯಸಿದ್ದು ಸಿಗದೇ ಹೋಗುವ ವೇದನೆಯಿಂದ ಅಂತಹ ಸ್ಥಿತಿ ಸಾಧ್ಯವಾಗುವ ಅವಕಾಶವನ್ನು ಹುಡುಕಾಡುತ್ತಾಳೆ. ತನ್ನ ಭಾವನೆಗಳಿಗೆ ಬೆಲೆ ಕೊಡುವ, ತನ್ನನ್ನು ಅರ್ಥಮಾಡಿಕೊಳ್ಳುವ ವ್ಯಕ್ತಿಯು ಸಿಕ್ಕಿದಾಗ ಬೇರೇನೂ ಆಲೋಚನೆ ಮಾಡದೆ ಅವನ ಜೊತೆ ಹೊರಟು ಬಿಡುತ್ತಾಳೆ. ಮತ್ತೆ ಮೊದಲ ದಾಂಪತ್ಯಕ್ಕೆ ವಾಪಾಸಾಗುವ ನಾಯಕಿಯ ನಿಲುವುಗಳು ಸಂಬಂಧಗಳನ್ನು ಮರು ಶೋಧಿಸಿಕೊಳ್ಳಬೇಕಾದ ಅಗತ್ಯವನ್ನು ಸೂಚಿಸುತ್ತವೆ. ಆಕೆಯ ಅಭಿಪ್ರಾಯ 'ಸಂಬಂಧಗಳನ್ನು ಕೊಳೆಯಲು ಬಿಟ್ಟು ಬಿಡುತ್ತೇವೆ. ಅವು ಸದ್ದಿಲ್ಲದೇ ಸತ್ತು, ಕೊಳೆತು ದುರ್ನಾತ ಹೊಮ್ಮಿದಾಗ ಮೂಗು ಮುಚ್ಚಿಕೊಳ್ಳುತ್ತೇವೆ. ಸರಿಯಾಗಿ ಸಂಬಂಧಗಳನ್ನು ಕಾಯ್ದುಕೊಳ್ಳದಿದ್ದರೆ ಅವು ತುಳಿವ ಹಾದಿ ಇದು' ಎನ್ನುವಲ್ಲಿ ಸಂಬಂಧಗಳನ್ನು ಪರೀಕ್ಷೆಗೊಡ್ಡಿದ್ದಾಳೆ. ಮಲಯಾಳದ ಲೇಖಕಿ ಸಾರಾ ಜೋಸೆಫ್‌ರ 'ಸ್ಕೂಟರ್' ಎನ್ನುವ ಕಥೆಯೊಂದಿದೆ. ಈ ಕಥೆಯಲ್ಲಿ ದಾಂಪತ್ಯ ಜೀವನದ ಯಾತ್ರೆಯನ್ನು ಸಂಕೇತಿಸುವ ಸ್ಕೂಟರ್, ಯಾತ್ರೆಯಲ್ಲಿ ಸ್ಕೂಟರ್ ಕೈಕೊಟ್ಟಾಗಲೆಲ್ಲಾ ಸಣ್ಣ ಪುಟ್ಟ ರಿಪೇರಿಗಳನ್ನು ಗೆಳೆಯರೆಲ್ಲ ಸೇರಿ ಮಾಡುತ್ತಾರೆ. ಎಂದರೆ ದಾಂಪತ್ಯದಲ್ಲಿ ನಡೆಯುವ ಸಣ್ಣ ಪುಟ್ಟ ಕಲಹಗಳನ್ನು ಬೆಳೆಯಲು ಬಿಡದೆ ಬಂಧುಗಳು, ಗೆಳೆಯರು ಸೇರಿ ಪರಿಹರಿಸುವ ಪ್ರಯತ್ನಗಳು ನಡೆಯುತ್ತವೆ. ಕೊನೆಗೆ ಇಂಧನದ ಸೋರುವಿಕೆಯಿಂದ ಸಂಪೂರ್ಣ ಹಾಳಾಗಿ ಬಿದ್ದು ಹೋಗುವ ಸ್ಕೂಟರ್‌ನ ಬಿಡಿಭಾಗಗಳು ಸುತ್ತುಮುತ್ತಲೆಲ್ಲಾ ದುರ್ನಾತ ಬೀರಲು ತೊಡಗಿದಾಗ 'ಇದು ನಮ್ಮ ಸ್ಕೂಟರೇ ಅಲ್ಲ' ವೆಂದು ಬಿಟ್ಟು ಹೋಗುವ ದಂಪತಿಗಳನ್ನು ಕಾಣುತ್ತೇವೆ. ಆದರೆ ಸಮಾಜ, ನಾತ ಬೀರುವ ಸ್ಕೂಟರಿನ ಬಿಡಿ ಭಾಗಗಳನ್ನು ಸೇರಿಸಿ ಅವುಗಳನ್ನು ಮೂಟೆ ಕಟ್ಟಿ ಒತ್ತಾಯದಿಂದ ಅವರ ಮೇಲೆ ಹೊರಿಸುತ್ತದೆ. ಇಲ್ಲಿ ಸಾಂಗತ್ಯವಿಲ್ಲದ ಸಂಬಂಧವನ್ನು ಸಮಾಜದ ಒತ್ತಾಯಕ್ಕೆ ಮಣಿದು ಕಟಾಚಾರವಾಗಿ ಮುಂದುವರಿಸಬೇಕಾದ ಅನಿವಾರ್ಯತೆ ಕಾಣಿಸಿಕೊಳ್ಳುತ್ತದೆ. ಪ್ರತಿ ವಿವಾಹಕ್ಕೆ ಪ್ರಶ್ನೆಯಾಗುವ ಇಂತಹ ಸಮಯದಲ್ಲಿ ಪ್ರತಿ ಹೆಣ್ಣು ಮಾಡುವ ಕೆಲಸವೆಂದರೆ ನೇಮಿಚಂದ್ರರ ಕಥಾನಾಯಕಿ ಹೇಳುವ ಪ್ರಕಾರ "ವಯಸ್ಸಾಯ್ತು, ಮದುವೆ, ಮಕ್ಕಳು ಎಲ್ಲಾ ಆಯ್ತು. ಇನ್ನೇನು ಬೇಕು' ಎಂಬ ಅಭಾವ ವೈರಾಗ್ಯದ ಮಾತು. ಅಂಥವರು ಮುವತ್ತಕ್ಕೆ ಮುಪ್ಪಾಗುವುದಷ್ಟೇ ಅಲ್ಲ, ಗೋರಿಯಾಗುತ್ತಾರೆ. ಇಲ್ಲ ಇದೆಲ್ಲ ಒದರಿ ಭಂಡ ಧೈರ್ಯವಿದ್ದವರು ಮತ್ತೊಂದು ಪ್ರಣಯ ಯಾತ್ರೆಗೆ ಕೈ ಹಾಕುತ್ತಾರೆ. ಎರಡರ ಹೊರತು ಬೇರೆ ಮಾರ್ಗವಿಲ್ಲವೇ? ಮೂಕವಾಗಬೇಕೆ, ಇಲ್ಲ ಅಬ್ಬರಿಸಿ ಹಾರಬೇಕೆ. ಇಲ್ಲ ಇಲ್ಲೆ ಈ ಕಿಲುಬು ಹಿಡಿದ ಸಂಬಂಧಗಳನ್ನು, ಭಾವನೆಗಳನ್ನು, ಬಯಕೆಗಳನ್ನು ಹುಣಿಸೆ ಹಣ್ಣಿನಿಂದ ತಿಕ್ಕಿ ತೊಳೆದು ಥಳಥಳ ಹೊಳೆಯಿಸಬಾರದೇಕೆ? ರೋಗಗ್ರಸ್ಥ ಸಂಬಂಧಗಳನ್ನು ಕಡಿದು ತುಂಡರಿಸುವ ಬದಲು, ಉಳಿಸಿಕೊಳ್ಳಲು ಸಾಧ್ಯವೇ?"–(ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು, ಪು.312). ವಿಶ್ಲೇಷಣೆಗೆ ಹಚ್ಚುವ ಇಂತಹ ಮಾತುಗಳು ಸ್ವಾಭಿಮಾನದ ಬದುಕು ಸಂಬಂಧಗಳ ಶಿಥಿಲತೆಗೆ ಕಾರಣಗಳಾಗದೆ ಅವುಗಳನ್ನು ಹೊಸತಾಗಿ ರೂಪಿಸಿಕೊಳ್ಳಬೇಕಾದ ಅಗತ್ಯವನ್ನು ಸಾರುತ್ತವೆ. ಹೆಣ್ಣನ್ನು ಆಕೆಯ ಪರಿಸರದಲ್ಲಿ ಅರ್ಥ ಮಾಡಿಕೊಳ್ಳಬೇಕಾದ, ಆಕೆಯ ವರ್ತನೆಗಳ ಹಿಂದಿನ ತುಮುಲಗಳನ್ನು ತಿಳಿಯಾಗಿಸಬೇಕಾದ ಪ್ರಯತ್ನ ನಡೆಯಬೇಕಿದೆ.

ಮಹಿಳೆಯರು ಬೌದ್ಧಿಕ ಅರಿವನ್ನು ಪಡೆದು ಅಂತರ್ಗತವಾಗಿ ಬೆಳೆಯಬೇಕಾದ ಅಗತ್ಯವನ್ನು ಸಿಮೊನ್ ದ ಬೊವಾ "ಹೆಂಗಸರು ಯಾವಾಗಲೂ ನಗಣ್ಯರಾಗಿಯೇ ಇದ್ದು ಎಂದೂ ಸಾರರೂಪಿಗಳು ಆಗಿಲ್ಲವಾದರೆ, ಅದಕ್ಕೆ ಅಂತಹ ಬದಲಾವಣೆಗಳನ್ನು ತಂದುಕೊಳ್ಳಲು ಅವರು ಸೋತುಹೋಗಿರುವುದೇ ಕಾರಣ"(ಸೆಕೆಂಡ್ ಸೆಕ್ಸ್, ಪು.30) ಎಂದು ಅಭಿಪ್ರಾಯ ಪಡುತ್ತಾರೆ. ಇದನ್ನೇ ನೇಮಿಚಂದ್ರರವರು 'ಕಪ್ಪು ಮೋಡ ಬೆಳ್ಳಿ ಅಂಚು' ಕಥೆಯಲ್ಲಿ ವಿವರಿಸುವ ರೀತಿ "ನಾವು ಜಡತ್ವವನ್ನು ಅವಳಿಯಾಗಿ ಪಡೆದು ಬಂದವರು, ಅವಶ್ಯಕತೆ ಇಲ್ಲದೆ ಏನನ್ನೂ ಕಲಿಯಲು, ಒಂದಿಂಚೂ ಬೆಳೆಯಲು ಸಿದ್ಧವಿಲ್ಲದವರು. ನಿಜ, ನಾನು ಹೋರಾಡಬೇಕಾಗಿರಲಿಲ್ಲ ಒಂಬತ್ತರಿಂದ ಐದರ ಕೆಲಸ ಹಿಡಿದು. ಆದರೆ ನನ್ನ ಬೆರಳ ತುದಿಯ ಪ್ರತಿಭೆಯನ್ನು ಉಳಿಸಿಕೊಳ್ಳಬಹುದಿತ್ತು. ಕಲಿತ ವಿದ್ಯೆಯನ್ನು ಬಳಸಿಕೊಳ್ಳಬಹುದಿತ್ತು. ಸ್ವಂತ ದುಡಿಮೆಯ ಸವಿರುಚಿಯನ್ನು ಒಂದಿಷ್ಟು ಸವಿಯಬಹುದಿತ್ತು. ಅಂಥಾ ಯಾವ ಯತ್ನವನ್ನು ಮಾಡಲಿಲ್ಲ, ಈ ಒಂದು ದಶಕದಲ್ಲಿ. ಎಂಥಾ ಹುಚ್ಚು ಜನ ನಾವು, ಬದುಕು ಅಂಚಿಗೆ ನೂಕುವವರೆಗೂ ನಿಂತಿರುತ್ತೇವೆ. ಕೊನೆಗೆ ಆ ತುದಿಯನ್ನು ಹಿಡಿದು ಜೋತಾಡುತ್ತೇವೆ. ಬೀಳಬಹುದಾದ ಪ್ರಪಾತಕ್ಕೆ ಹೆದರಿ ತಲ್ಲಣಿಸಿ"(ಇಲ್ಲಿವರೆಗಿನ ನೇಮಿಚಂದ್ರರ ಕಥೆಗಳು, ಪು. 231) ಇಲ್ಲಿ ಲೇಖಕಿ, ಮಹಿಳೆಗೆ ಬೆಳೆಯಬೇಕು ಎನ್ನುವ ಮಹತ್ವಾಕಾಂಕ್ಷೆಯೇ ಇಲ್ಲದ ನಿಷ್ಕ್ರಿಯ ಸ್ಥಿತಿಯನ್ನು ವಿಡಂಬಿಸುತ್ತಾರೆ. ಮಹಿಳೆಯ ವಿಕಾಸಕ್ಕೆ ಪೂರಕ ವಾತಾವರಣ ಸೃಷ್ಟಿಯಾಗಿದ್ದರೂ ಆಕೆ ಬೆಳೆಯಬೇಕಾದುದು ತನ್ನದೇ ಸತ್ವ ಬಲದಿಂದ ಎನ್ನುವ ಎಚ್ಚರ ನೀಡುತ್ತಾರೆ.

ನೇಮಿಚಂದ್ರ ಅವರ 'ಕಪ್ಪು ಮೋಡ, ಬೆಳ್ಳಿ ಅಂಚು' ಕಥೆಯು ಹೆಣ್ಣಿನಲ್ಲಿ ಆರ್ಥಿಕ ಅಭದ್ರತೆ ತರುವ ಸಮಸ್ಯೆಗಳನ್ನು ಮುಂದಿಡುತ್ತದೆ. ಆರ್ಥಿಕವಾಗಿ ಪರಾವಲಂಬಿಯಾದ ಹೆಣ್ಣು ಕಥೆಯಲ್ಲಿ ಹೇಳುವಂತೆ "ನನ್ನ ಮನೆ, ನನ್ನ ಗಂಡ, ನನ್ನ ಮಗು, ನಾಲ್ಕಂಕಿಯ ಸಂಬಳ" ಎನ್ನುವ ಅತ್ಯಂತ ಸುಭದ್ರ ಸಂಬಂಧದಲ್ಲಿ ಕಾಲುಚಾಚಿ ಆರಾಮವಾಗಿರುತ್ತಾಳೆ. ಹೀಗಿದ್ದರೆ ಆಕೆಗೆ ಏನೂ ಸಮಸ್ಯೆಯಿಲ್ಲ. ಆದರೆ ಸಮಸ್ಯೆ ಆರಂಭವಾಗುವುದು ಆಕೆಯ ಪತಿ ಆಕೆಯನ್ನು ಅತಂತ್ರ ಸ್ಥಿತಿಯಲ್ಲಿ ಬಿಟ್ಟು ಹೋದಲ್ಲಿಂದ. ಆತನಿಲ್ಲದೆ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯತೆಗಳೇ ಇಲ್ಲದಿರುವಾಗ ಆಕೆಗಿರುವ ಒಂದೇ ದಾರಿ 'ಆತ್ಮಹತ್ಯೆ' ಯಾಗುತ್ತದೆ. ಸಮಾಜ ಹೆಣ್ಣಿನ ಸುತ್ತ ನಿರ್ಮಿಸಿರುವ ಬಂಧನದ ಚೌಕಟ್ಟನ್ನು ಮುರಿದು ದಾಟಲು ತೋರುವ ಅಳುಕೇ ಹೆಣ್ಣಿನ ದುರಂತ ಸ್ಥಿತಿಗೆ ಕಾರಣವಾಗುವುದಿದೆ. ಕಥೆಯಲ್ಲಿ ಆತ್ಮಹತ್ಯೆಗೆ ಯತ್ನಿಸಿ ಬದುಕುಳಿದ ಕಥಾನಾಯಕಿ ಆಸ್ಪತ್ರೆಯಲ್ಲಿದ್ದಾಳೆ.

ಕಥೆಯಲ್ಲಿ ಬರುವ ಸಾಲುಗಳು "ಬದುಕಲು ನೆಪಗಳನ್ನು ಹುಡುಕಬೇಡ. ನಿನಗಾಗಿ, ನಿನ್ನ ಬದುಕಿಗಾಗಿ, ಈ ಜೀವನದ ಸೋಲುಗಳನ್ನೆಲ್ಲ ಸವಾಲುಗಳನ್ನಾಗಿ ಉತ್ತರಿಸುವ ಛಲಕ್ಕಾಗಿ, ಪಂಥಾಹ್ವಾನಕ್ಕಾಗಿ ಬದುಕು. ನಾಳೆ ಪುಟ್ಟಿ ಬೆಳೆದು ದೂರಾಗಬಹುದು. ಋಣಭಾರವನ್ನು ಅವಳ ಹೆಗಲಿಗೆ ಹೇರಿ ಹಿಡಿದಿಡಬೇಡ. ಹಾರಲು ಬಿಡು ಹಕ್ಕಿಯಂತೆ. ಮತ್ತೆ ಗಾಳಿಪಟದಂತೆ ಜಗ್ಗಿ ಸೂತ್ರ ಎಳೆಯಬೇಡ.ನೀನು ನಿಲ್ಲಬಲ್ಲೆ ನಿನ್ನದೇ ಪಾದಗಳ ಬಲದ ಮೇಲೆ"–(ಅದೇ, ಪು.225) ಇವು ಆಧುನಿಕ ಬದುಕು ಹೆಣ್ಣಿನಲ್ಲಿ ತುಂಬುವ ಆತ್ಮವಿಶ್ವಾಸದ ಮಾತುಗಳು. ಮನುಸ್ಮೃತಿಯು, ಹೆಣ್ಣು ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಗಂಡನ, ವೃದ್ಧಾಪ್ಯದಲ್ಲಿ ಮಕ್ಕಳ ಆಶ್ರಯದಲ್ಲಿ ಕಳೆಯಬೇಕಾದವಳು ಎನ್ನುತ್ತದೆ; ಆದರೆ ಹೆಣ್ಣು ಯಾರ ಆಶ್ರಯದಲ್ಲಿಯೂ ಕಳೆಯಬೇಕಾದವಳಲ್ಲ. ಅವಳು ನಿಲ್ಲಬೇಕಾದುದು ಅವಳದೇ ಪಾದಗಳ ಬಲದ ಮೇಲೆ ಎನ್ನುವುದನ್ನು ಸ್ತ್ರೀವಾದಿ ರಚನೆಗಳು ಒತ್ತಿ ಹೇಳುತ್ತವೆ. ಇದು ಸಾಧ್ಯವಾಗದೆ ಹೋಗುವ ದುರಂತ ಕಾಣಿಸಿಕೊಳ್ಳುವುದು ಹೆಣ್ಣಿಗೆ ಗಂಡಿನ ಜೊತೆಗಿರುವ ಆರ್ಥಿಕ ಅವಲಂಬನೆಯಿಂದ, ಮಾನಸಿಕ ಅವಲಂಬನೆಯ ಸ್ಥಿತಿಯಿಂದ. ಇವುಗಳಿಂದ ಹೊರಬರಬೇಕಾದ ಅವಶ್ಯಕತೆ ಮಹಿಳೆಗೆ ಆತ್ಮಗೌರವದ ಬದುಕನ್ನು ನೀಡಬಲ್ಲುದು. ಆತ್ಮಹತ್ಯೆಗೆ ಯತ್ನಿಸಿದ ಕಥಾನಾಯಕಿ ತನಗೆ ತಿಳಿದ ಸ್ವಂತ ಉದ್ಯೋಗದಲ್ಲಿ ಬೆಳೆಯುವ ಮೂಲಕ ಗಂಡನಿಲ್ಲದೆಯೂ ಆತ್ಮಗೌರವದ ಬದುಕನ್ನು ನಡೆಸುವ ಹಂತಕ್ಕೆ ಬೆಳೆಯುತ್ತಾಳೆ. ಇಂದು ಅವನಿಲ್ಲದೆಯೂ ಕಥಾನಾಯಕಿ ಬದುಕಬಲ್ಲಳು. ಕಥೆಯಲ್ಲಿ ಹೆಣ್ಣಿನ ಸ್ವಾವಲಂಬನೆಯ, ಸ್ವಾಭಿಮಾನದ ಜೀವನದ ಬಗೆಗೆ

ಪ್ರೋತ್ಸಾಹವಿದೆ. ಸಾಂಪ್ರದಾಯಿಕ ಮನೋಧರ್ಮದ ಸುಳಿಯಿಂದ ಹಂತ ಹಂತವಾಗಿ ಬಿಡುಗಡೆಗೊಳ್ಳುತ್ತಿರುವ, ಆರ್ಥಿಕ ಸ್ವಾವಲಂಬನೆಯನ್ನು ಕಂಡುಕೊಳ್ಳುತ್ತಿರುವ ಹೆಣ್ಣಿನ ಮನೋದ್ವಂದ್ವತೆಯನ್ನು ಕಥೆ ವ್ಯಕ್ತಪಡಿಸುತ್ತದೆ. ಇದು ಹೆಣ್ಣಿನಲ್ಲಿ ಸ್ತ್ರೀ ವಿಶಿಷ್ಟ ಅನನ್ಯತೆ ಎಚ್ಚರಗೊಳ್ಳುತ್ತಿರುವ ಹಂತವೂ ಆಗಿದೆ.

ನೇಮಿಚಂದ್ರರ 'ಮರಳಿ ಬದುಕಿಗೆ ಈ ಪಯಣ' ಕಥೆಯಲ್ಲಿ ಪುರುಷ ಪಾತ್ರದ ನಿರೂಪಣೆಯಲ್ಲಿ ಸ್ತ್ರೀ ಅಸ್ತಿತ್ವದ ಚಿತ್ರಣವಿದೆ. ಪುರುಷ ದೃಷ್ಟಿಕೋನದಲ್ಲಿ ಹೆಣ್ಣಿಗೆ ಘನತೆ, ಗೌರವ ಪ್ರಾಪ್ತಿಯಾಗಿದೆ. ಬಹುಪಾಲು ಗಂಡಸರಿಗೆ ತಮ್ಮ ಪತ್ನಿಯಂದಿರು ಅಡುಗೆ ಕೋಣೆಯನ್ನು ನಿಭಾಯಿಸುವ ಜೈವಿಕ ಲಿಂಗ ಸಂಬಂಧಿ ಜೀವಿಯಾದರೆ ಈ ಕಥೆಯಲ್ಲಿ ಅದರಾಚೆಗೆ ಕೂಡ ಹೆಣ್ಣಿನ 'ಇರುವಿಕೆಗೆ' ಮಹತ್ವ ಪ್ರಾಪ್ತಿಯಾಗಿದೆ. ಸಾಂಪ್ರದಾಯಿಕ ಸಿದ್ಧ ಚೌಕಟ್ಟಿನ ಸ್ತ್ರೀಯ ಸ್ಥಾನದಲ್ಲಿ ಆಧುನಿಕ ಸ್ತ್ರೀ ಮಾದರಿ ಕಾಣಿಸಿಕೊಂಡಿದೆ. ಅಪಘಾತದಿಂದಾಗಿ ಮಿದುಳು ಸತ್ತ ಜೀವಂತ ಹೆಣದ ಸ್ಥಿತಿಯಲ್ಲಿ ಬದುಕಿ ಉಳಿದ ಕಥಾನಾಯಕಿಯ ಕುರಿತು ಕಥೆಯಲ್ಲಿ ಬರುವ ಸಾಲುಗಳು "ಬಹುಪಾಲು ಗಂಡಂದಿರಂತೆ ನಾನು ನಿನ್ನನ್ನು ಅಡುಗೆ ಮನೆಯಲ್ಲಿ, ಮಲಗುವ ಕೋಣೆಯಲ್ಲಿ 'ಮಿಸ್' ಮಾಡುವುದಿಲ್ಲ. ಈ ಮನೆಯ ಕೋಣೆ ಕೋಣೆಯಲ್ಲಿ ನಿನ್ನ ಇರುವಿತ್ತು. ಜೀವಂತಿಕೆಯಿತ್ತು. ಅದನ್ನು ಬೆಳಗಿನ ಬಿಸಿ ಕಾಫಿಗೆ, ರಾತ್ರಿಯ ರುಚಿ ಅಡುಗೆಗೆ ಹೋಲಿಸಲಾಗದು. ಬಹುಶಃ ಇವೆಲ್ಲವೂ ಈ ಕ್ಷಣ ನನಗೆ ಬೇಕೆಂದರೆ ಸಿಕ್ಕಿ ಬಿಡುತ್ತವೆ, ಆದರೆ ನಿನ್ನ 'ಇರುವನ್ನು' ಹೇಗೆ ತರುವುದು. ಬಂದವಳೇ ಕೋಣೆಯಲ್ಲಿ ಕಂಪ್ಯೂಟರ್ ಮುಂದೆ ಕುಳಿತು 'ಶೂ.. ಗಲಾಟೆ ಮಾಡಬೇಡಿ..' ಎಂದು ನಮ್ಮತ್ತ ಒಂದು ಕೂಗು ಎಸೆದು, ಕಛೇರಿಯ ಕೆಲಸದೊಡನೆ ಗುದ್ದಾಡುತ್ತಾ ಕುಳಿತ ದಿನಗಳು ಎಷ್ಟೋ ಇದ್ದುವು. ಆದರೂ ಆ ಕೋಣೆಯಲ್ಲಿ ನೀನಿದ್ದ 'ಇರುವು' ಸಾಕಿತ್ತು. ನೀ ಇಲ್ಲಿದ್ದೆ, ನಮ್ಮ ನಡುವಿದ್ದೆ, ಅದು ಮುಖ್ಯವಿತ್ತು. ನಿನ್ನ ಇರುವಿಕೆಗೆ ತನ್ನದೇ ಶಕ್ತಿಯಿತ್ತು."–(ಅದೇ, ಪು.33). ಸ್ತ್ರೀಯ ವ್ಯಕ್ತಿತ್ವ ಸ್ಥಾಪನೆಯ ಚಿತ್ರಣವಿರುವ ಶಕ್ತವಾದ ಇಂತಹ ಮಾದರಿಗಿಂತ ಬೇರೊಂದು ಮಾದರಿಯನ್ನು ಕಾಣಲು ಸಾಧ್ಯವಿಲ್ಲ. ಕಥೆಯ ಇನ್ನೊಂದು ಕಡೆ ಬರುವ ಸಾಲುಗಳು "ನಾವು ಉಳಿಸಿಕೊಂಡದ್ದು ಯಾರನ್ನು? ನಿನ್ನನ್ನೆ, ನೀನು ಗೂಡು ಬಿಟ್ಟು ಹಾರಿದ ಅಸ್ಥಿಪಂಜರವನ್ನೇ? ಜೀವ ಇರುವುದೆಲ್ಲ 'ನೀನಲ್ಲ', ನೀನು ದೇಹವಲ್ಲ, ಎದೆಯ ಏರಿಳಿತದ ಉಸಿರಲ್ಲಿ ನೀನಿಲ್ಲ. ಕಣ್ತೆರದ ನಿದ್ದೆಗೆಲ್ಲಿ ಎಚ್ಚರ?"–(ಅದೇ, ಪು.37) ಇಲ್ಲಿ 'ನೀನು' ಎನ್ನುವುದು ಜೀವವಿರುವ ಹೆಣ್ಣಿನ ದೇಹವಲ್ಲ. ಅವಳ ವ್ಯಕ್ತಿತ್ವ, ಅಸ್ತಿತ್ವ, ಇರುವಿಕೆ, ಗುರುತು, ಮನಸ್ಸು, ಭಾವನೆ ಎಲ್ಲವೂ ಮೇಳೈಸಿದ ಸ್ತ್ರೀ ವಿಶಿಷ್ಟ ಅನನ್ಯತೆ. ಹೆಣ್ಣನ್ನು ಶರೀರ ಮಾತ್ರವಾಗಿ ಕಂಡ ಸ್ಥಾಪಿತ ಮೌಲ್ಯಕ್ಕಿಂತ ಬದಲಾದ ಮೌಲ್ಯ ದೃಷ್ಟಿಕೋನ ಇಲ್ಲಿದೆ. ಆಕೆಗೂ ಒಂದು ವ್ಯಕ್ತಿತ್ವ ಸ್ಥಾಪನೆಯಾಗಿಬಿಟ್ಟಿದೆ. ಆದ್ದರಿಂದಲೇ ಪತಿ ಪತ್ನಿಯರಲ್ಲಿ ಯಾರಿಗೆ ಸಮಸ್ಯೆಯಾದರೂ ಅದು ಇಬ್ಬರ ಸಮಸ್ಯೆಗಳೂ ಆಗುತ್ತವೆ. ಯಾರಿಗೆ ನೋವಾದರೂ ಇಬ್ಬರಿಗೂ ನೋವಾಗುತ್ತದೆ. ಕಥೆಯಲ್ಲಿ ಹೇಳುವಂತೆ "ಇದು ಬರೀ ಸುಧಾಳ ಕಾಳಗವಲ್ಲ. ಇದು ನಮ್ಮ ಯುದ್ಧ. ವಿಧಿಗೆ ಎದುರು ನಿಂತ ನಮ್ಮ ಜೊತೆಯ ಯುದ್ಧ. ಅಪ್ಪ, ಹತನಾದ ಜೊತೆಯ ಯೋಧರನ್ನು ರಣರಂಗದಲ್ಲಿ ಬಿಟ್ಟು ಬರೋಲ್ಲ. ಜೀವ ಪಣವಿಟ್ಟು ಹೊತ್ತು ತರುತ್ತಾರೆ. ನನ್ನ ಹುಡುಗಿ ಬದುಕಿದ್ದಾಳೆ, ಅವಳನ್ನು ಸಾವಿಗೊಪ್ಪಿಸಿ ನಾನು ಸೋತು ಹಿಂತಿರುಗುದಿಲ್ಲ"_(ಅದೇ, ಪು.41).ಇಲ್ಲಿ ಅಪಘಾತದಿಂದ ಅನಾರೋಗ್ಯ ಪೀಡಿತಳಾದ ಪತ್ನಿಯನ್ನು ಮರಳಿ ಬದುಕಿಗೆ ವಾಪಾಸು ತರಲು ಪ್ರಯತ್ನಿಸುವ ಪತಿಯ ಪ್ರಯತ್ನವಿದೆ. ಕಥೆಯಲ್ಲಿ ಪುರುಷ ದೃಷ್ಟಿಕೋನದಲ್ಲಿ ಸ್ತ್ರೀ ಪಾತ್ರವನ್ನು ಚಿತ್ರೀಕರಿಸುವ ಮೂಲಕ ಲೇಖಕಿ, ಹೆಣ್ಣಿನ ಬಗೆಗಿನ ಈ ದೃಷ್ಟಿಕೋನವೇ ಸಮಾಜದಲ್ಲಿ ಮೂಡಿಬರಬೇಕಾದ ಅಗತ್ಯವನ್ನು ಧ್ವನಿಸಿದ್ದಾರೆ.

ಸಾಹಿತ್ಯದಲ್ಲಿ ಸ್ತ್ರೀ ಪರಿಕಲ್ಪನೆಯ ಹಂತಗಳನ್ನು ಗುರುತಿಸುವಾಗ ಎಲ್‌ಮನ್ ಎನ್ನುವ ಪಾಶ್ಚಾತ್ಯ ಸ್ತ್ರೀವಾದಿ ವಿಮರ್ಶಕಿ ಎಂಬತ್ತರ ದಶಕದ ಕಥೆಗಳಲ್ಲಿ ಹೆಣ್ಣು ತನ್ನನ್ನು ತಾನು ಶೋಧಿಸಿಕೊಳ್ಳುವ, ಅಸ್ತಿತ್ವವನ್ನು ಗುರುತಿಸಿಕೊಳ್ಳುವ 'ಫೀಮೇಲ್'(ಸ್ತ್ರೀಪ್ರಜ್ಞೆ ಅಥವಾ ಸ್ತ್ರೀವಾದದ) ಹಂತವನ್ನು ಗುರುತಿಸುತ್ತಾಳೆ. ಈ ಹಂತವನ್ನು ಡಿ.ಆರ್. ನಾಗರಾಜರು ಲೇಖನವೊಂದರಲ್ಲಿ 'ಸ್ತ್ರೀ

ಸಮೃದ್ಧತೆಯ ರಚನೆಗಳೆಂದು' ಕರೆದಿದ್ದಾರೆ. ಇಲ್ಲಿ ಹೆಣ್ಣು ಎಂದರೆ 'ಒಂದು ಜೈವಿಕ ಶಕ್ತಿ. ಇಡಿಯ ವಿಶ್ವಕ್ಕೆ ಇದು ಮೂಲ ಸ್ಥಿತಿ. ಇಲ್ಲಿ ಗಂಡು ಯಜಮಾನನಲ್ಲ. ಜೊತೆಗಾರ ಆಗಿರಬಹುದು. ಅವನಿಲ್ಲದೆಯೂ ಹೆಣ್ಣು ಪರಿಪೂರ್ಣಳು"–(ಇಲ್ಲಿಂದ ಮುಂದೆಲ್ಲಿಗೆ, ವೀಣಾ ಶಾಂತೇಶ್ವರ ಉದ್ಧೃತ, ಪು.3). ನೇಮಿಚಂದ್ರರ 'ನೀನಿರುವೆ ನಮ್ಮೊಡನೆ', 'ಮರಳಿ ಬದುಕಿಗೆ ಈ ಪಯಣ' ಕಥೆಗಳಲ್ಲಿ ನಶ್ವರ ಜೀವನದ ಅರಿವಿನಿಂದ ಮೂಡಿದ, ಸಂಘರ್ಷಗಳಿಲ್ಲದ ಗಂಡು ಹೆಣ್ಣಿನ ಹೊಸ ಮಾದರಿಯನ್ನು ಕಟ್ಟಿಕೊಡುತ್ತಾರೆ. ದಾಂಪತ್ಯದಲ್ಲಿ ಪರಸ್ಪರ ಪ್ರೀತಿ, ಗೌರವದಿಂದ ಒಬ್ಬರಿಗೊಬ್ಬರು ಅರ್ಥಮಾಡಿಕೊಂಡು, ಬೌದ್ಧಿಕ ತರ್ಕಗಳಿಲ್ಲದ ಸಹಬಾಳ್ವೆ ನಡೆಸುವ ದಂಪತಿಯರು ಮೇಲಿನ ಕಥೆಗಳಲ್ಲಿ ಕಾಣಿಸಿಕೊಂಡಿದ್ದಾರೆ. ವೀಣಾ ಶಾಂತೇಶ್ವರರ 'ಹೀಗೊಂದು ಕಥೆ'ಯಲ್ಲಿ ಲಿವಿಂಗ್ ಟುಗೇದರ್ ಕಾನ್ಸೆಪ್ಟ್ ಇದ್ದುಮದುವೆಯಾಗದೆ ಸಹಬಾಳ್ವೆ ಮಾಡುವ ಯುವಕ, ಯುವತಿಯರನ್ನು ಚಿತ್ರಿಸಿದ್ದಾರೆ. ಇಲ್ಲಿ ಪುರುಷನನ್ನು ಜೊತೆಗಾರನಾಗಿ ಮಾತ್ರ ಕಾಣುವ ದೃಷ್ಟಿಕೋನವಿದೆ. ಆತನಿಲ್ಲದೆಯೂ ಈ ಕಥೆಗಳ ಹೆಣ್ಣುಗಳು ಬದುಕಬಲ್ಲರು.

ಒಟ್ಟಿನಲ್ಲಿ ಮಹಿಳೆಗೆ ಶಿಕ್ಷಣ, ಉದ್ಯೋಗ, ಆರ್ಥಿಕ ಸ್ವಾವಲಂಬನೆ ತಂದುಕೊಟ್ಟ ಸ್ವಾಭಿಮಾನದ ಜೀವನವು ಹೆಣ್ಣಿನ ವ್ಯಕ್ತಿತ್ವವನ್ನು ರೂಪಿಸುತ್ತಿರುವ ಹಂತಗಳನ್ನು ಕಥೆಗಳಲ್ಲಿ ಗುರುತಿಸಬಹುದು. ತಮ್ಮ ಆಂತರಂಗಿಕ ಆಲೋಚನೆ, ಸಾಮರ್ಥ್ಯವನ್ನು ಮನಗಂಡ ಸ್ತ್ರೀ ಸಮುದಾಯ ತಮ್ಮನ್ನು ತಾವು ಗ್ರಹಿಸಿಕೊಂಡು, ನಿರೂಪಿಸಿ, ನಿರ್ವಚಿಸಿಕೊಳ್ಳಲು ಮುಂದಾಗಿರುವುದು ಕಥೆಗಳಲ್ಲಿ ವ್ಯಕ್ತ. ಇಲ್ಲಿನ ಸ್ತ್ರೀಯರಲ್ಲಿ ಕಾಣಿಸಿಕೊಳ್ಳುತ್ತಿರುವ ಆತ್ಮವಿಶ್ವಾಸ, ಧೈರ್ಯ, ಬದುಕುವ ಛಲ, ಜೀವಂತಿಕೆ ಮಹತ್ವದ್ದಾಗಿದೆ.

**ಆಕರ ಗ್ರಂಥಗಳು:**

1. ಇಲ್ಲಿಯವರೆಗಿನ ನೇಮಿಚಂದ್ರರ ಕಥೆಗಳು, ನೇಮಿಚಂದ್ರ, ಅಂಕಿತ ಪುಸ್ತಕ, 2001
2. ಅಲೆಗಳಲ್ಲಿ ಅಂತರಂಗ, ವೈದೇಹಿ, ಅಕ್ಷರ ಪ್ರಕಾಶನ, 2006
3. ವೈದೇಹಿ ವಾಚಿಕೆ, ಟಿ.ಪಿ.ಅಶೋಕ, ನುಡಿ ಪುಸ್ತಕ, 2009
4. ವೈದೇಹಿ ಕಥನ, ಟಿ.ಪಿ.ಅಶೋಕ, ಅಕ್ಷರ ಪ್ರಕಾಶನ, ಸಾಗರ, 2013
5. ಇಲ್ಲಿಂದ ಮುಂದೆಲ್ಲಿಗೆ?, ವೀಣಾ ಶಾಂತೇಶ್ವರ, ಪ್ರಸಾರಾಂಗ, ಹಂಪಿ, 2009
6. ಕೈಗನ್ನಡಿ, ಶೈಲಾ ಯು, ಶ್ರೀ ಬೆನಕಾ ಪ್ರಕಾಶನ, 2012
7. ದ ಸೆಕೆಂಡ್ ಸೆಕ್ಸ್, ಶ್ರೀಮತಿ ಎಚ್.ಎಸ್(ಅನುವಾದ), ಅಧ್ಯಯನ ಮಂಡಲ, ಬೆಂಗಳೂರು, 2007
8. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ, ಶ್ರೀಮತಿ ಎಚ್.ಎಸ್(ಸಂ), ಪ್ರಸಾರಾಂಗ, ಹಂಪಿ, 2006.